# ವಿಜ್ಞಾನ ಲೋಕದ ಕನ್ನಡ ತಾರೆಗಳು

ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳ ಸಾಧನೆಗಳ ವಿಷಯದಲ್ಲಿ ಕಳೆದ ಒಂದು ದಶಕದಿಂದ ಕರ್ನಾಟಕ ಮುಂಚೂಣಿಯಲ್ಲಿದೆ. ದೇಶದ ಅಷ್ಟೂ ರಾಜ್ಯಗಳ ಪೈಕಿ ನಾವೀನ್ಯತೆಯ ಸೂಚ್ಯಂಕದಲ್ಲಿ ಸದಾ ಮುಂದಿರುವ ಕರ್ನಾಟಕ ಹಲವು ಮಹತ್ವಪೂರ್ಣ ಸಾಧನೆ ಮಾಡಿದ್ದು, ವಿಜ್ಞಾನಿ ತಂತ್ರಜ್ಞರ ತವರು ಎನ್ನಿಸಿಕೊಂಡಿದೆ. ಕನ್ನಡಿಗರು ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಗಾಗ ದೇಶ ಮತ್ತು ಜಾಗತಿಕ ಮಟ್ಟದಲ್ಲಿ ಸುದ್ದಿ ಮಾಡುತ್ತಲೇ ಇರುತ್ತಾರೆ. ನಾಡಿನ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನಿಸಿದ ಪ್ರತಿಭಾಸಂಪನ್ನರು ರಾಜ್ಯ–ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಖ್ಯಾತಿ, ಪದವಿ ಪುರಸ್ಕಾರ ಪಡೆದಿದ್ದಾರೆ. ಜಗತ್ತಿನ ನಾನಾ ಭಾಗಗಳಲ್ಲಿ ಇದ್ದುಕೊಂಡು ಗಣಿತ, ಭೌತ, ರಸಾಯನ, ಜೀವ ವಿಜ್ಞಾನ, ಕಂಪ್ಯೂಟರ್, ಬಾಹ್ಯಾಕಾಶ, ಕೃಷಿ, ಭೂ ವಿಜ್ಞಾನ, ಮನೋವಿಜ್ಞಾನ, ಪರಮಾಣು ವಿಜ್ಞಾನ, ಮುಂತಾದ ವಿಜ್ಞಾನ ಕ್ಷೇತ್ರಗಳಲ್ಲಿ ಅಪಾರ ಕೆಲಸ ಮಾಡಿದ್ದಾರೆ. ‘ಆಡು ಮುಟ್ಟದ ಸೊಪ್ಪಿಲ್ಲ, ಕನ್ನಡಿಗರು ದುಡಿಯದ ವಿಜ್ಞಾನ ಕ್ಷೇತ್ರವಿಲ್ಲ’ ಎಂಬ ಮಾತನ್ನು ಸಾರ್ಥಕಗೊಳಿಸಿದ್ದಾರೆ. ಅವರೆಲ್ಲ ಯಾರು? ಅವರ ಸಾಧನೆಗಳೇನು? ಫೆಬ್ರುವರಿ 28ರ ‘ರಾಷ್ಟ್ರೀಯ ವಿಜ್ಞಾನ ದಿನ’ದ ಸಂದರ್ಭದಲ್ಲಿ ವಿಜ್ಞಾನ ಪಥದಲ್ಲಿ ಕನ್ನಡದ ರಥ ಎಳೆದವರ ಅವಲೋಕನ.

■ ಗುರುರಾಜ್ ಎಸ್. ದಾವಣಗೆರೆ

